


ಹೋಗಿ ಲಿವರ್ ಹಣ್ಣಿನ ಆಪರೇಷನ್ ಮಾಡಿಸಿಕೊಂಡು ಬಂದಿದ್ದಾನೆ. ಇರುವ ಒಬ್ಬಳು ಮಗಳನ್ನು ನವೋದಯ ಶಾಲೆಯಲ್ಲಿ ಬಿಟ್ಟು ಓದಿಸುತ್ತಿದ್ದಾನೆ.

ಮನೆಯಲ್ಲಿ ಗಂಡ, ಹೆಂಡತಿ, ಅವ್ವ ಮೂರೇ ಜನ. ಬೆಳಗ್ಗೆ ಎದ್ದು ಮುದುಕಿಯ ಶುಶ್ರೂಷೆ ಮುಗಿಸಿ ಅವಳಿಗೆ ರೊಟ್ಟಿ ತಿನ್ನಿಸಿ, ತಾವೂ ತಿಂದು, ಮನೆ ಬಾಗಿಲ ತೋಟಕ್ಕೋ, ತಗ್ಗಿನಲ್ಲಿರುವ ಗದ್ದೆಗೋ ಕೆಲಸಕ್ಕೆ ಹೋಗುತ್ತಿದ್ದರು. ಬಾಗಿಲೆಳೆದುಕೊಂಡು ಹೋದರೆ ಮುದುಕಿ ಮಧ್ಯಾಹ್ನದವರೆಗೂ ಮಲಗಿ ನಿದ್ದೆ ಮಾಡುತ್ತಿರುತ್ತಿತ್ತು. ಮಧ್ಯಾಹ್ನ ಬಂದು ಮುದುಕಿಯನ್ನು ಏಳಿಸಿ ಅದಕ್ಕಷ್ಟು ತಿನ್ನಿಸಿ, ತಾವೂ ಊಟ ಮಾಡಿ ಮತ್ತೆ ಬಾಗಿಲೆಳೆದುಕೊಂಡು ಕೆಲಸಕ್ಕೆ ಹೋಗಿಬಿಡುತ್ತಿದ್ದರು.

ಯಾರು ಎಷ್ಟು ಚೆನ್ನಾಗಿ ನೋಡಿಕೊಂಡರೆ ಏನು? ಮನುಷ್ಯನ ದೇಹ ಪ್ರಕೃತಿ ಎಂದಿನಂತೆಯೇ ಮುಂದುವರಿಯುತ್ತದೆಯೇ? ಬರಬರುತ್ತಾ ಮುದುಕಿಯ ಶರೀರ ಕ್ಷೀಣಿಸಿ ಅಂಗಾಂಗಗಳು ನಿಷ್ಕ್ರಿಯವಾಗತೊಡಗಿದವು. ಮುದುಕಿ ಹಾಸಿಗೆಯ ಪಾಲಾಯಿತು. ಅದು ಇನ್ನು ಹೆಚ್ಚು ದಿನ ಬದುಕಲಾರದು ಎಂದು ಜನ ಮಾತಾಡಿಕೊಳ್ಳತೊಡಗಿದರು.

ಇತ್ತ ಕಡೆ ಊರೊಳಗಿದ್ದ ಅಣ್ಣ, ಪುಟ್ಟೇಗೌಡನ ಯಾಲಕ್ಕಿ ಹನಾಲು ಪಾಳು ಬಿದ್ದು ವರಮಾನ ಇಲ್ಲದಂತಾಗಿತ್ತು. ಇರುವ ಗದ್ದೆಯಲ್ಲಿ ವರ್ಷಕ್ಕಾಗುವಷ್ಟು ಭತ್ತ ಬೆಳೆದುಕೊಂಡು, ಬೇಸಿಗೆಯಲ್ಲಿ, ಖರ್ಚಿಗಾಗುವಷ್ಟು ಮೆಣಸಿನಕಾಯಿ ಬೆಳೆದುಕೊಂಡು ದಿನ ದೂಡುತ್ತಿದ್ದರು. ಹೆಣ್ಣು ಮಕ್ಕಳ ಮದುವೆಯಾಗಿ ಇರುವ ಒಬ್ಬ ಮಗ ಬದುಕು ಅರಸಿ, ಜಿಲ್ಲಾ ಕೇಂದ್ರದಲ್ಲಿದ್ದ ಚಾಂಡಿಯ ಅಣ್ಣನ ಮಗ ಪರಮೇಶಿಯ ಬಳಿ ಹೋಗಿದ್ದ.

ವಕೀಲನಾಗಿದ್ದ ಪರಮೇಶಿಯ ಬಳಿಗೆ ಅಂತಹಾ ಕೇಸುಗಳೇನೂ ಬರುತ್ತಿರಲಿಲ್ಲ. ಅವನೇ ಕೇಸುಗಳನ್ನು ಅರಿಸಿಕೊಂಡು ಅಲೆಯುತ್ತಿದ್ದ. ನಗರದ ಎಲ್ಲಾ ಆಸ್ಪತ್ರೆ, ನರ್ಸಿಂಗ್ ಹೋಂಗಳನ್ನು ಎಡತಾಕಿ ಅಲ್ಲಿಯ ಎಮರ್ಜನ್ಸಿ ವಾರ್ಡ್‌ಗಳಲ್ಲಿ ಯಾರಾದರೂ ಆಕ್ಸಿಡೆಂಟ್ ಪಾರ್ಟಿಗಳು ಅಡ್ಮಿಡ್ ಆಗಿದ್ದಾರೋ ಎಂದು ನೋಡುತ್ತಿದ್ದ. ಅಂಥವರು ಇದ್ದಲ್ಲಿ, ಅವರು ಮೊದಲೇ ಪರಸ್ಪರ ರಾಜಿ ತೀರ್ಮಾನ ಮಾಡಿಕೊಂಡಿದ್ದರೂ ಬಿಡದೆ, ಇನ್ಸೂರೆನ್ಸ್ ಆಸೆ ಹುಟ್ಟಿಸಿ ಕೇಸು ಹಾಕಿಸಿಬಿಡುತ್ತಿದ್ದ. ಯಾವುದಾದರೂ ಗಲ್ಲಿಯಲ್ಲಿ